# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 317 |
| ಸದಸ್ಯರು ಹೆಸರು | : | ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 29.01.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಸ್ತುತ ರಾಜಕೀಯ ನಾಯಕರು, ವಿಐಪಿ ಸೇರಿ ಇತರರ ಭದ್ರತೆಗಾಗಿ ನಿಯೋಜಿಸಿರುವ ಒಟ್ಟು ಅಂಗರಕ್ಷಕರ ಸಂಖ್ಯೆ ಎಷ್ಟು; ಯಾವ ನಿಯಮಗಳ ಅನುಸಾರ ಅಂಗರಕ್ಷರನ್ನು ನೇಮಿಸಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು); | ಪ್ರಸ್ತುತ ರಾಜ್ಯದಲ್ಲಿ ರಾಜಕೀಯ ನಾಯಕರು, ವಿಐಪಿ ಸೇರಿ ಇತರರ ಭದ್ರತೆಗಾಗಿ ಒಟ್ಟು 991 ಸಂಖ್ಯೆಯ ಅಂಗರಕ್ಷಕರನ್ನು ಒದಗಿಸಲಾಗಿದೆ.<br><br>➢ ಕರ್ನಾಟಕ ಘನತೆವೆತ್ತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿರವರು, ಮಾನ್ಯ ಸಭಾಪತಿ, ಮಾನ್ಯ ಮುಖ್ಯ ನ್ಯಾಯಾಧೀಶರು, ಉಚ್ಛ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಮಾನ್ಯ ಸಚಿವರು, ಉಪ ಸಭಾಪತಿ, ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರಿಗೆ ಸ್ಥಾನ ಆಧಾರಿತ ಭದ್ರತೆಯನ್ನು ಒದಗಿಸಲಾಗುತ್ತದೆ. ಬೆದರಿಕೆಯ ಸ್ವರೂಪದ ಆಧಾರದ ಮೇರೆಗೆ ಹೆಚ್ಚಿನ ಭದ್ರತೆಯನ್ನು / ವರ್ಗೀಕೃತ ಭದ್ರತೆಯನ್ನು ಒದಗಿಸಲಾಗುತ್ತದೆ.<br><br>➢ ಸ್ಥಳೀಯ ಮತ್ತು ಬೆದರಿಕೆಯ ಸ್ವರೂಪಕ್ಕೆ ಅನುಗುಣವಾಗಿ ಸಮಿತಿಯ ನಿರ್ಣಯದ ನಿರೀಕ್ಷೆಯಲ್ಲಿ ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗುತ್ತದೆ ಮತ್ತು ಹೆಚ್ಚಿನ ಅಂಗರಕ್ಷಕರನ್ನು ನಿಯೋಜಿಸಲಾಗಿರುತ್ತದೆ.<br><br>➢ ಸದರಿ ಪ್ರಕ್ರಿಯೆ ನಿಯತಕಾಲಿಕವಾಗಿದ್ದು, ಬೆದರಿಕೆ ನಿರ್ಧರಣಾ ವರದಿಗಳನ್ನು ಆಧರಿಸಿ, ಅಂಗರಕ್ಷಕ ಭದ್ರತೆಯನ್ನು ಒದಗಿಸುವ / ಮುಂದುವರೆಸುವ / ಹೆಚ್ಚಿಸುವ / ಹಿಂಪಡೆಯುವ ಬಗ್ಗೆ ಕ್ರಮಕೈಗೊಳ್ಳಲಾಗುವುದು. ಅದೇ ರೀತಿ ವರ್ಗೀಕೃತ ಭದ್ರತೆಗೆ ಸಂಬಂಧಿಸಿದಂತೆ ಸಹಾ ಕ್ರಮಕೈಗೊಳ್ಳಲಾಗುತ್ತಿದೆ. ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ | ರಾಜ್ಯದಲ್ಲಿ ರಾಜಕೀಯ ನಾಯಕರು (ಹೆಸರು ಸಮೇತ) ಸೇರಿ ಇತರರ ವಾಸದ ಮನೆಗಳ ಭದ್ರತೆ ಸೇವೆಗಾಗಿ ಎಷ್ಟು ಜನ ಪೊಲೀಸ್ ಗಾರ್ಡ್ ಗಳನ್ನು ನೇಮಿಸಲಾಗಿದೆ; ಯಾರ ಯಾರ ಮನೆಗೆ ಭದ್ರತೆ ಒದಗಿಸಲಾಗಿದೆ; ಯಾವ ನಿಯಮಗಳ ಅನುಸಾರ ನೇಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು); | ರಾಜ್ಯದಲ್ಲಿ ರಾಜಕೀಯ ನಾಯಕರು ಸೇರಿ ಇತರರಿಗೆ ಒಟ್ಟು 667 ಸಂಖ್ಯೆಯ ನಿವಾಸದ ಗಾರ್ಡ್ ಸಿಬ್ಬಂದಿಗಳನ್ನು ಭದ್ರತೆಗಾಗಿ ಒದಗಿಸಲಾಗಿದೆ.<br><br>ಗಣ್ಯವ್ಯಕ್ತಿಗಳಿಗೆ ಹಾಗೂ ಇತರರಿಗೆ ಇರುವ ಬೆದರಿಕೆ ಗ್ರಹಿಕೆಯ ಬಗ್ಗೆ ನಿರ್ಧರಿಸಿ ಭದ್ರತೆಯನ್ನು ನಿರ್ಧರಿಸಲು ಸರ್ಕಾರ ವರ್ಗೀಕೃತ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಮತ್ತು ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ (ಬೆದರಿಕೆ ನಿರ್ಧರಣಾ ವರದಿ) ಪರಿಶೀಲಿಸಿ ಸೂಕ್ತ |

| | | |
|---|---|---|
| | | ನಿರ್ಣಯ ತೆಗೆದುಕೊಳ್ಳುತ್ತದೆ.<br><br>ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಗರ / ಜಿಲ್ಲಾ ಪೊಲೀಸ್ ಘಟಕದಿಂದ ಭದ್ರತೆಯನ್ನು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಭದ್ರತೆಯನ್ನುಒದಗಿಸಲಾಗುತ್ತದೆ.<br><br>ರಕ್ಷಣೆಗೊಳಪಟ್ಟ ವ್ಯಕ್ತಿಗಳ ಭದ್ರತಾ ಹಿತದೃಷ್ಟಿಯಿಂದ ಸಂಕ್ಷಿಪ್ತ ವಿವರಗಳನ್ನು ನೀಡಲಾಗಿದೆ. |
| ಇ | ರಾಜ್ಯದಲ್ಲಿ ರಾಜಕೀಯ ನಾಯಕರು ಸೇರಿ ಇತರರ ಭದ್ರತೆಗಾಗಿ, ವಾಸದ ಮನೆಯ ಭದ್ರತೆಗಾಗಿ ನೇಮಿಸಲಾಗಿದ್ದ ಪೊಲೀಸರನ್ನು/ ಗಾರ್ಡ್‌ಗಳನ್ನೂ ವಾಪಸ್ ತೆಗೆದುಕೊಳ್ಳಲು ಅಥವಾ ಭದ್ರತೆಯನ್ನು ಹೆಚ್ಚಿಸಲು ಅನುಸರಿಸಲಾಗುತ್ತಿರುವ ಮಾನದಂಡದ ವಿವರಗಳೇನು; ಯಾವ ಮಾನದಂಡಗಳ ಅನುಸಾರ ಭದ್ರತೆಯನ್ನು ಹೆಚ್ಚಿಸಲಾಗುತ್ತದೆ ? | ರಾಜ್ಯದಲ್ಲಿ ರಾಜಕೀಯ ನಾಯಕರು ಸೇರಿದಂತೆ ಇತರರಿಗೆ ಇರುವ ಬೆದರಿಕೆ ಗ್ರಹಿಕೆಯ ಬಗ್ಗೆ ಸಂಬಂಧಪಟ್ಟ ವ್ಯಾಪ್ತಿಯ ಪೊಲೀಸ್ ಘಟಕಾಧಿಕಾರಿಗಳಿಂದ ಅವರಿಗೆ ಇರುವ ಬೆದರಿಕೆ ಬಗ್ಗೆ ವರದಿ ಪಡೆದು ಸರ್ಕಾರ ವರ್ಗೀಕೃತ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಮತ್ತು ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.<br><br>ಮೇಲೆ ತಿಳಿಸಿದಂತೆ ಭದ್ರತಾ ಸಮಿತಿಯ ಪುನರ್ ವಿಮರ್ಶಣಾ ಸಮಿತಿಯಲ್ಲಿ ವರ್ಗೀಕೃತ ಭದ್ರತೆ ಮತ್ತು ಅಂಗರಕ್ಷಕ ಭದ್ರತೆಯನ್ನು ಒದಗಿಸುವ/ ಮುಂದುವರೆಸುವ/ ಹೆಚ್ಚಿಸುವ ಅಥವಾ ಹಿಂಪಡೆಯುವ ಬಗ್ಗೆ ನಿರ್ಣಯ ಕೈಗೊಳ್ಳಲಾಗುತ್ತದೆ. |
| ಈ | ಒಂದು ವೇಳೆ ನೀಡಿರುವ ಭದ್ರತೆಯನ್ನು ಹಿಂಪಡೆದಿದ್ದರೆ, ಯಾವ ರಾಜಕೀಯ ನಾಯಕರ ಭದ್ರತೆಯನ್ನು ಹಿಂಪಡೆಯಲಾಗಿದೆ; ಹಿಂಪಡೆಯಲು ಕಾರಣಗಳೇನು; ಯಾವ ನಿಯಮಗಳ ಅನುಸಾರ ಹಿಂಪಡೆಯಲಾಗಿದೆ; ಭದ್ರತೆಯನ್ನು ಹಿಂಪಡೆಯಲು ಸರ್ಕಾರ ಅನುಸರಿಸುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು); | ರಾಜಕೀಯ ನಾಯಕರು ಸೇರಿದಂತೆ ಇತರರಿಗೆ ಇರುವ ಬೆದರಿಕೆ ಗ್ರಹಿಕೆಯ ಬಗ್ಗೆ ನಿರ್ಧರಿಸಿ ಭದ್ರತೆಯನ್ನು ನಿರ್ಧರಿಸಲು ಸರ್ಕಾರ ವರ್ಗೀಕೃತ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಮತ್ತು ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ. |
| ಉ | ರಾಜ್ಯದಲ್ಲಿ ರಾಜಕೀಯ ನಾಯಕರು ಸೇರಿ ಇತರರ ಭದ್ರತೆಗಾಗಿ ನೇಮಿಸಲು ರಚಿಸಲಾಗಿರುವ ಸಮಿತಿ ವಿವರ ನೀಡುವುದು? | ವಿವರಗಳನ್ನುಅನುಬಂಧದಲ್ಲಿ ನೀಡಲಾಗಿದೆ. |

ಹೆಚ್‌ಡಿ 43 ಪಿಸಿಇ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.

# ಅನುಬಂಧ

ಗಣ್ಯವ್ಯಕ್ತಿಗಳಿಗೆ ಅವರಿಗಿರುವ ಬೆದರಿಕೆಯ ಮೂಲ/ಬೆದರಿಕೆಯ ಗ್ರಹಿಕೆ ಅಥವಾ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಭದ್ರತಾ ಶ್ರೇಣಿಯನ್ನು ರಾಜ್ಯ ಸರ್ಕಾರ ರಚಿಸಿರುವ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ/ವರ್ಗೀಕೃತ ಪುನರ್ ವಿಮರ್ಶಣಾ ಸಮಿತಿ ನಿರ್ಧರಿಸುತ್ತದೆ.

ಬೆದರಿಕೆಯ ಗ್ರಹಿಕೆ/ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ, ಅಥವಾ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಅನ್ವಯ ಸಹ ನಗರ / ಜಿಲ್ಲಾ ಪೊಲೀಸ್ ಘಟಕದಿಂದ ಭದ್ರತೆಯನ್ನು ಒದಗಿಸಲಾಗುತ್ತದೆ.

ಘನತೆವೆತ್ತ ರಾಜ್ಯಪಾಲರು, ಮಾನ್ಯ ಮುಖ್ಯ ನ್ಯಾಯಾಧೀಶರು, ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಮಾನ್ಯ ಮುಖ್ಯ ಮಂತ್ರಿರವರು, ಮಾನ್ಯ ಸಚಿವರು, ಮಾನ್ಯ ಸಭಾಪತಿ, ಉಪಸಭಾಪತಿ, ವಿಧಾನಸಭೆಯ ಮಾನ್ಯ ಸಭಾದ್ಯಕ್ಷರು, ಉಪ ಸಭಾಧ್ಯಕ್ಷರಿಗೆ ಸ್ಥಾನ ಆಧಾರಿತ ಭದ್ರತೆಯನ್ನು ಒದಗಿಸಲಾಗುತ್ತದೆ. ವರ್ಗೀಕೃತ ಭದ್ರತೆಯನ್ನು ಬೆದರಿಕೆ ಗ್ರಹಿಕೆಯ ಆಧಾರದ ಮೇರೆಗೆ ಒದಗಿಸಲಾಗುತ್ತದೆ.

1) **ವರ್ಗೀಕೃತ ಭದ್ರತೆ**: ರಾಜ್ಯ ಗುಪ್ತವಾರ್ತೆಯ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ಕೇಂದ್ರ ಗುಪ್ತಚರ ಇಲಾಖೆ, ರಾಜ್ಯ ಸರ್ಕಾರ ಒಳಾಡಳಿತ ಇಲಾಖೆ, ಡಿಜಿ ಮತ್ತು ಐಜಿಪಿರವರ ಕಛೇರಿ, ಬೆಂಗಳೂರು ನಗರ ಪೊಲೀಸ್ ಘಟಕದ ಪ್ರತಿನಿಧಿಗಳನ್ನೊಳಗೊಂಡ ಭದ್ರತಾ ಸಮಿತಿ ಮೇಲೆ ತಿಳಿಸಿದಂತೆ ಬೆದರಿಕೆ ನಿರ್ಧರಣಾ ವರದಿಗಳು ಮತ್ತು ಬೆದರಿಕೆಯ ಗ್ರಹಿಕೆಯ ಆಧಾರದ ಮೇರೆಗೆ ವರ್ಗೀಕೃತ ಭದ್ರತೆ ಒದಗಿಸುವ /ಮುಂದುವರಿಸುವ/ ಹೆಚ್ಚಿಸುವ ಅಥವಾ ಹಿಂಪಡೆಯುವ ಕುರಿತಂತೆ ಶಿಫಾರಸ್ಸು ಮಾಡುತ್ತದೆ. ಈ ಶಿಫಾರಸ್ಸುಗಳನ್ನು ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ರಾಜ್ಯ ವರ್ಗೀಕೃತ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯತೆಗೆದು ಕೊಳ್ಳುತ್ತದೆ.

ಕೇಂದ್ರ ಗೃಹಮಂತ್ರಾಲಯದ Yellow Book"ರ ಅನ್ವಯ ವರ್ಗೀಕೃತ ಭದ್ರತೆಯನ್ನು (ಜೆಡ್ ಪ್ಲಸ್, ಜೆಡ್, ವೈ-ಪ್ಲಸ್, ವೈ ಮತ್ತು ಎಕ್ಸ್) ಭದ್ರತೆಯನ್ನುಒದಗಿಸಲಾಗುತ್ತದೆ.

2) **ಅಂಗರಕ್ಷಕ ಭದ್ರತೆ:** ಅಂಗರಕ್ಷಕ ಭದ್ರತೆಯನ್ನು ಕರ್ನಾಟಕ ಸರ್ಕಾರದ ಅಂಗರಕ್ಷಕ ಭದ್ರತೆಯ ಮಾರ್ಗಸೂಚಿ (ಸರ್ಕಾರಿ ಆದೇಶ ಸಂಖ್ಯೆ: ಒಇ 574 ಎಸ್ಎಸ್‌ಟಿ 2011) ದಿನಾಂಕ: 23.04.2012) ರ ಅನ್ವಯ ರಾಜ್ಯ ಗುಪ್ತವಾರ್ತೆಯ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ಒಳಾಡಳಿತ ಇಲಾಖೆ, ಪೊಲೀಸ್ ಪ್ರಧಾನ ಕಚೇರಿ, ಬೆಂಗಳೂರು ನಗರ ಪೊಲೀಸ್ ಘಟಕದ ಪ್ರತಿನಿಧಿಗಳನ್ನೊಳಗೊಂಡ ರಾಜ್ಯ ಅಂಗರಕ್ಷಕ ಭದ್ರತಾ ಸಮಿತಿ ಬೆದರಿಕೆ ನಿರ್ಧರಣಾ ವರದಿಗಳು ಮತ್ತು ಬೆದರಿಕೆಯ ಗ್ರಹಿಕೆಯ ಆಧಾರದ ಮೇರೆಗೆ ಅಂಗರಕ್ಷಕ ಭದ್ರತೆಯನ್ನು ಶಿಫಾರಸ್ಸು ಮಾಡುತ್ತದೆ. ಈ ಶಿಫಾರಸ್ಸುಗಳನ್ನುಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶಣಾ ಸಮಿತಿ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.

ಸ್ಥಳೀಯ ಪರಿಸ್ಥಿತಿ ಬೆದರಿಕೆಯ ಸ್ವರೂಪಕ್ಕೆ ಅನುಗುಣವಾಗಿ ಸಮಿತಿಯ ನಿರ್ಣಯದ ನಿರೀಕ್ಷೆಯಲ್ಲಿ ವರ್ಗೀಕೃತ / ಅಂಗರಕ್ಷಕ ಭದ್ರತೆಯನ್ನು ಒದಗಿಸಲಾಗುತ್ತದೆ / ಹೆಚ್ಚಿನ ಅಂಗರಕ್ಷಕರನ್ನು ನಿಯೋಜಿಸಲಾಗಿರುತ್ತದೆ.

ಮೇಲೆ ತಿಳಿಸಿದಂತೆ ಸದರಿ ಪ್ರಕ್ರಿಯೆ ನಿಯತಕಾಲಿಕವಾಗಿದ್ದು, ಬೆದರಿಕೆ ನಿರ್ಧರಣಾ ವರದಿಗಳನ್ನುಆಧರಿಸಿ, ವರ್ಗೀಕೃತ/ ಅಂಗರಕ್ಷಕ ಭದ್ರತೆಯನ್ನು ಒದಗಿಸುವ/ ಮುಂದುವರೆಸುವ/ ಹೆಚ್ಚಿಸುವ / ಹಿಂಪಡೆಯುವ ಬಗ್ಗೆ ಕ್ರಮಕೈಗೊಳ್ಳಲಾಗುತ್ತದೆ.

****